ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಎಡಿಎಂ.2:ಸಮುದಾಯದತ್ತ:ಶಾಲೆ:1/2012-13 ದಿನಾಂಕ: 21.03.2013

## : ಜ್ಞಾಪನ :

**ವಿಷಯ:** 2012-13ನೇ ಸಾಲಿನ ಎರಡನೇ ಸಮುದಾಯದತ್ತ ಶಾಲೆ ಕಾರ್ಯಕ್ರಮವನ್ನು ನಡೆಸುವ ಬಗ್ಗೆ.

**ಉಲ್ಲೇಖ:** ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿ 2012-13ನೇ ಸಾಲಿನಲ್ಲಿ ಪ್ರಕಟಿಸಿರುವಂತೆ

* * * * *

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾರ್ಗದರ್ಶಿಯಲ್ಲಿ ಸೂಚಿಸಿರುವಂತೆ ಹಾಗು ಸೆಪ್ಟಂಬರ್ 2012ರ ತಿಂಗಳಲ್ಲಿ ನಡೆದ ಉಪನಿರ್ದೇಶಕರುಗಳ ಸಭೆಯಲ್ಲಿ ತಿಳಿಸಿದ ಪ್ರಕಾರ ಸಮುದಾಯದತ್ತ ಶಾಲಾ ಕಾರ್ಯಕ್ರಮ ಕಳೆದ ವರ್ಷಗಳಿಂದಲೂ ಅನೂಚಾನವಾಗಿ ನಡೆಯುತ್ತಾ ಬಂದಿದೆ. ಸದರಿ ಕಾರ್ಯಕ್ರಮವನ್ನು ನಡೆಸುವಂತೆ ಸೂಚನೆಯನ್ನು ಉಲ್ಲೇಖದ ಮಾರ್ಗದರ್ಶಿಯಲ್ಲಿ ಸೂಚಿಸಿರುವಂತೆ ನಿಮಗೆ ಈಗಾಗಲೇ ತಿಳಿಸಲಾಗಿದೆ. ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಕ್ರಿಯಾತ್ಮಕವಾಗಿ ಮತ್ತು ವ್ಯವಸ್ಥಿತವಾಗಿ ನಡೆಯಬೇಕೆಂಬ ಸೂಚನೆಯನ್ನು ನೀಡಲಾಗಿದೆ.

### 01. ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನಾಂಕಗಳು.

1. ಪ್ರಾಥಮಿಕ ಶಾಲೆ – ದಿನಾಂಕ: 06.04.2013
2. ಪ್ರೌಢಶಾಲೆ – ದಿನಾಂಕ: 14.04.2013

### 02. ಸಮುದಾಯದತ್ತ ಶಾಲಾ ಕಾರ್ಯಕ್ರಮ ಶಾಲಾ ಹಂತದಲ್ಲಿ ನಡೆಯಬೇಕಾದ ಸ್ವರೂಪ:

ಶಾಲಾ ಹಂತದಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮವು ಈ ಮುಂದಿನಂತೆ ವ್ಯವಸ್ಥೆಗೊಳಿಸತಕ್ಕದ್ದು.

- ✓ ಎಸ್.ಡಿ.ಎಂ.ಸಿ ಸದಸ್ಯರಿಗೆ ಮತ್ತು ಎಲ್ಲಾ ಪೋಷಕರು ಸಮುದಾಯದತ್ತ ಶಾಲಾ ಕಾರ್ಯಕ್ರಮ ಕುರಿತು ಸೂಚನೆಯನ್ನು ಮುಂಗಡವಾಗಿ ನೀಡುವುದು. ಹಾಗೂ ಇತರೆ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದು.
- ✓ ಶಾಲಾ ಆವರಣ ಮತ್ತು / ಪರಿಸರವನ್ನು ಸ್ವಚ್ಛಗೊಳಿಸುವುದು ಮತ್ತು ಅಲಂಕರಿಸುವುದು.
- ✓ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯನ್ನು ಎಲ್ಲಾ ಅಧ್ಯಾಪಕರು ಮಾಪನ ತಮ್ಮ ವಿಷಯಗಳಲ್ಲಿ ಮಾಡಬೇಕು. ಘಟಕ ಪರೀಕ್ಷೆ, ಕಿರು ಪರೀಕ್ಷೆ / ಮೊದಲನೇ ಸೆಮಿಸ್ಟರ್ / ಅರ್ಧ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಸಿರುವ ಕಲಿಕಾ ಪ್ರಗತಿಯನ್ನು ಸ್ಪಷ್ಟವಾಗಿ ಗುರುತು ಮಾಡಿಕೊಂಡಿರಬೇಕು. ಈ ಮಾಹಿತಿಯನ್ನು ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನದಂದು ಪೋಷಕರೊಂದಿಗೆ ವಿನಿಮಯ ಮಾಡಿಕೊಳ್ಳುವುದು.
- ✓ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನಗಳಲ್ಲಿ ಶಾಲಾ ಪ್ರಾರ್ಥನೆ ಬಳಿಕ ಎಸ್.ಡಿ.ಎಂ.ಸಿ ಸಭೆಯನ್ನು ಕನಿಷ್ಠ ಅರ್ಧ ಗಂಟೆ ಕಾಲ ನಡೆಸಬೇಕು. ಶಾಲೆಯಲ್ಲಿ ಗೈರು ಹಾಜರಾಗುತ್ತಿರುವ ಮಕ್ಕಳ ವಿವರ. ಶಾಲೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ

ಸ್ಥೂಲನೋಟ, ಶಾಲೆಯಲ್ಲಿ ಕಂಡು ಬರುವ ಕೊರತೆಗಳು, ಇತ್ಯಾದಿ ಸಂಗತಿಗಳ ಕುರಿತು ಚರ್ಚೆ ನಡೆಸಿ ದಾಖಲಿಸಬೇಕು.

✓ ತರಗತಿ ಕೋಣೆಯಲ್ಲಿ ಪೋಷಕರನ್ನು ಕರೆದು ಕೂಡಿಸಿ, ತಮ್ಮ ಮಕ್ಕಳ ಕಲಿಕೆಯ ಪ್ರಗತಿ ಕುರಿತು ವೈಯಕ್ತಿಕವಾಗಿ ಪೋಷಕರೊಂದಿಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದು. ಈ ಕ್ರಮದಿಂದ ಮಕ್ಕಳ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗದಂತೆ ಅಧ್ಯಾಪಕರು ಎಚ್ಚರವಹಿಸುವಂತೆ ಸೂಚನೆ ನೀಡಬೇಕು. ತರಗತಿವಾರು ಮಾಹಿತಿ ವಿನಿಮಯ ಮಾಡಬೇಕಾದ ಕ್ರಮವನ್ನು ಮುಂದಿನಂತೆ ನೀಡಲಾಗಿದೆ.

✓ ದಿನಾಂಕ:14.04.2013 ರಂದು ಕಡ್ಡಾಯವಾಗಿ ಅಂಬೇಡ್ಕರ್ ಜಯಂತಿ ಆಚರಿಸಲು ತಿಳಿಸಲಾಗಿದೆ.

| ಕ್ರ.ಸಂ | ಸಮಯ | ಪ್ರಾಥಮಿಕ ಶಾಲೆ | ಪ್ರೌಢಶಾಲೆ |
|---|---|---|---|
| 01. | 10.30 ರಿಂದ 11.30ರ ವರೆಗೆ | 1 ಮತ್ತು 2ನೇ ತರಗತಿ | 8ನೇ ತರಗತಿ |
| 02. | 11.30 ರಿಂದ 12.30ರ ವರೆಗೆ | 3 ಮತ್ತು 4ನೇ ತರಗತಿ | 9ನೇ ತರಗತಿ |
| 03. | 12.30 ರಿಂದ 1.30ರ ವರೆಗೆ | 5 ಮತ್ತು 6ನೇ ತರಗತಿ | 10ನೇ ತರಗತಿ |
| 04. | 1.30 ರಿಂದ 2.30ರ ವರೆಗೆ | ಮಧ್ಯಾಹ್ನದ ಉಪಹಾರ | |
| 05. | 2.30 ರಿಂದ 3.30ರ ವರೆಗೆ | 7ನೇ ತರಗತಿ | |
| 06. | 3.30 ರಿಂದ 4.30ರ ವರೆಗೆ | ಸಾಂಸ್ಕೃತಿಕ ಕಾರ್ಯಕ್ರಮ | |
| 07. | 4.30 ರಿಂದ 5.25ರ ವರೆಗೆ | ಎಸ್.ಡಿ.ಎಂ.ಸಿ ಇವರೊಂದಿಗೆ ಗೈರು ಹಾಜರಾಗುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಮನೆಗಳಿಗೆ ಎಸ್.ಡಿ.ಎಂ.ಸಿ ಮತ್ತು ಇತರ ಶಿಕ್ಷಣಾಸಕ್ತರೊಂದಿಗೆ ಭೇಟಿ ನೀಡುವುದು. | |

### *03. ಬ್ಲಾಕ್ ಹಂತದಲ್ಲಿ ನಿರ್ವಹಿಸಬೇಕಾದ ಕಾರ್ಯಗಳು:*

✓ ದಿನಾಂಕ: 03.04.2013ರೊಳಗೆ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರ ಸಭೆಯನ್ನು ನಡೆಸಿ ಸಮುದಾಯದತ್ತ ಶಾಲಾ ಕಾರ್ಯಕ್ರಮವನ್ನು ನಡೆಸುವ ಕುರಿತು ವಿವರವಾಗಿ ಚರ್ಚಿಸಿ ಮಾಹಿತಿ ನೀಡುವುದು.

✓ ಸ್ಥಳೀಯ ಮಾಧ್ಯಮಗಳಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮ ಕುರಿತಂತೆ ವ್ಯಾಪಕ ಪ್ರಚಾರವನ್ನು ಸುದ್ದಿಯಾಗಿ ಮತ್ತು ಲೇಖನಗಳ ಮೂಲಕ ನೀಡುವುದು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಬ್ಯಾನರ್‌ಗಳನ್ನು ಬರೆದು ಕಟ್ಟಿಸುವುದು.

✓ ನಿಮ್ಮಲ್ಲಿ ಇರುವ ಉಸ್ತುವಾರಿ ಅಧಿಕಾರಿಗಳಾದ ಸಿ.ಆರ್.ಪಿ., ಬಿ.ಆರ್.ಪಿ., ಇ.ಸಿ.ಓ., ಬಿ.ಆರ್.ಸಿ ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರನ್ನು ಪ್ರತಿ 10 ಶಾಲೆಗೆ ನೋಡಲ್ ಅಧಿಕಾರಿಯಾಗಿ ನೇಮಿಸುವುದು. ಸದರಿ ನೋಡಲ್ ಅಧಿಕಾರಿಗಳು ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವ ದಿನದಂದು 'ತಮ್ಮ ಕ್ಷೇತ್ರದಲ್ಲಿ ಪ್ರವಾಸ ಮಾಡಿ ವಸ್ತುಸ್ಥಿತಿಯನ್ನು ಗಮನಿಸಿ ಸದರಿ ಕಾರ್ಯಕ್ರಮ ನಡೆದ ಮಾರನೇ ದಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ಒಪ್ಪಿಸುವಂತೆ ವ್ಯವಸ್ಥೆಗೊಳಿಸುವುದು. ಇದಕ್ಕಾಗಿ ಲಗತ್ತಿಸಿರುವ ನಮೂನೆಯನ್ನು ಬಳಸುವುದು.

✓ ಪ್ರತಿ ಒಂದು ಅಥವಾ 2 ಶಾಲೆಗಳಿಗೆ ಒಬ್ಬರಂತೆ ಪ್ರೌಢಶಾಲಾ ಅಧ್ಯಾಪಕರನ್ನು ವೀಕ್ಷಕರನ್ನಾಗಿ / ಮಾರ್ಗದರ್ಶಕರನ್ನಾಗಿ ನೇಮಿಸುವುದು. ಇವರು ನಿರ್ವಹಿಸಬೇಕಾದ ಕಾರ್ಯದ ಕುರಿತು ಮೇಲೆ ಸೂಚಿಸಿರುವ ನೋಡೆಲ್ ಅಧಿಕಾರಿಗಳು ಮಾಹಿತಿಯನ್ನು ನೀಡಿ ಸರಿಯಾದ ಮಾರ್ಗದರ್ಶನವನ್ನು ನೀಡತಕ್ಕದ್ದು.

✓ ವಿದ್ಯಾರ್ಥಿಗಳಿಗೆ ಪ್ರಗತಿ ಪತ್ರಗಳನ್ನು ಈ ಅವಧಿಯಲ್ಲಿ ಪೋಷಕರಿಗೆ ತೋರಿಸಿ ಅವರ ಮಕ್ಕಳ ಪ್ರಗತಿ ಕುರಿತು ಅಧ್ಯಾಪಕರು ಚರ್ಚಿಸುವಂತೆ ವ್ಯವಸ್ಥೆ ಕೈಗೊಳ್ಳುವುದು.

**04. ಜಿಲ್ಲಾ ಹಂತದ ಅಧಿಕಾರಿಗಳು ನಿರ್ವಹಿಸಬೇಕಾದ ಕಾರ್ಯಗಳು:**

- ✓ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ., ಡಯಟ್, ಪ್ರಾಂಶುಪಾಲರು, ಡಯಟ್ ನೋಡಲ್ ಅಧಿಕಾರಿಗಳ ಸಭೆಯನ್ನು ದಿನಾಂಕ:04.04.2013ರಂದು ನಡೆಸುವುದು ಹಾಗೂ ಸೂಕ್ತ ಮಾರ್ಗದರ್ಶನ ನೀಡುವುದು. [ಉಪನಿರ್ದೇಶಕರು (ಆಡಳಿತ)]
- ✓ ತಾಲ್ಲೂಕು ನೋಡಲ್ ಅಧಿಕಾರಿಗಳನ್ನು ನೇಮಿಸುವುದು ಹಾಗೂ ಅವರ ವಿವರವನ್ನು ಈ ಕಛೇರಿಯ ಸಹನಿರ್ದೇಶಕರು [ಶಾಲಾ ಶಿಕ್ಷಣ] ಇವರಿಗೆ ಕೂಡಲೇ ಇ-ಮೇಲ್ ಮೂಲಕ ಕಳುಹಿಸುವುದು.
- ✓ ಸದರಿ ನೋಡಲ್ ಅಧಿಕಾರಿಗಳು ಕಾರ್ಯಕ್ರಮದ ದಿನದಂದು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ಕೊಟ್ಟು ಒಟ್ಟಾರೆ ಸಮುದಾಯದತ್ತ ಶಾಲೆಯ ಚಿತ್ರಣವನ್ನು ಉಪನಿರ್ದೇಶಕರು [ಆಡಳಿತ / ಅಭಿವೃದ್ಧಿ] ಇಬ್ಬರಿಗೂ ನೀಡುವುದು.
- ✓ ಕಾರ್ಯಕ್ರಮ ಮುಗಿದ ಎರಡು ದಿನಗಳೊಳಗೆ ಈ ಪತ್ರದ ಜೊತೆಗೆ ಲಗತ್ತಿಸಿರುವ ನಮೂನೆಯಲ್ಲೇ ಮಾಹಿತಿಯನ್ನು ಒದಗಿಸತಕ್ಕದ್ದು.
- ✓ ತಾಲ್ಲೂಕು ನೋಡೆಲ್ ಅಧಿಕಾರಿಗಳು ತಾಲ್ಲೂಕಿನಲ್ಲಿ ನಡೆಯುವ ಸಭೆಗೆ ಹಾಜರಾಗಿ ಮಾರ್ಗದರ್ಶನ ನೀಡುವುದು.
- ✓ ಜಿಲ್ಲಾ ಹಂತದಲ್ಲಿ ನಡೆಯುವ ಸಭೆಗೆ ರಾಜ್ಯ ಹಂತದ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ತಪ್ಪದೇ ಕರೆಯುವುದು.

ಮೇಲಿನ ಕಾರ್ಯಕ್ರಮದ ಹಂದರವು ಒಂದು ಸ್ಥೂಲವಾದ ರೂಪುರೇಷೆಯಾಗಿದೆ. ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಮತ್ತು ಕಾರ್ಯಕ್ರಮದ ಆಶಯಕ್ಕೆ ಭಂಗ ಬಾರದ ರೀತಿಯಲ್ಲಿ ಕೆಲವು ಅಂಶಗಳನ್ನು ಸೇರಿಸಿಕೊಳ್ಳಬಹುದು ಹಾಗೂ ತನ್ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ನಿರ್ದೇಶಕರು(ಪ್ರೌಢಶಿಕ್ಷಣ)

ನಿರ್ದೇಶಕರು[ಪ್ರಾಥಮಿಕ ಶಿಕ್ಷಣ]

**ಇವರಿಗೆ:**

**01.** ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗಾ.
**02.** ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
**03.** ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರುಗಳಿಗೆ.
**04.** ರಾಜ್ಯದಲ್ಲಿನ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
**05.** ರಾಜ್ಯದಲ್ಲಿನ ಎಲ್ಲಾ ಉಪನಿರ್ದೇಶಕರುಗಳಿಗೆ ಆಡಳಿತ / ಅಭಿವೃದ್ಧಿ.
**06.** ರಾಜ್ಯದಲ್ಲಿನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

**ಮಾಹಿತಿಗಾಗಿ:**

**01.** ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ, ಬೆಂಗಳೂರು.
**02.** ರಾಷ್ಟ್ರೀಯ ಮಾಧ್ಯಮಿಕ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ.
**03.** ಶಿಕ್ಷಣ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
**04.** ಕಛೇರಿ ಪ್ರತಿ.